ಮಾಡಲಾಗುತ್ತಿದೆ. ಗುತ್ತಿಗೆದಾರರಿಂದ ನಿರ್ವಹಣೆ ಅವಧಿ ಮುಗಿದಂತಹ ಸ್ಥಳಗಳಲ್ಲಿ ಇಲಾಖಾ ಮುಖಾಂತರ ನಿರ್ವಹಿಸಲಾಗುತ್ತಿದೆ.

ಆನೆ ತಡೆ ಕಂದಕಗಳ ನಿರ್ವಹಣೆಗೆ ಸಂಬಂಧಿಸಿದಂತೆ ಹೂಳು ತುಂಬಿದ ಪ್ರದೇಶಗಳಲ್ಲಿ ಹೂಳೆತ್ತುವುದು. ಕಂದಕ ವಿಕಾರಗೊಂಡ ಸ್ಥಳಗಳಲ್ಲಿ (Shape out) ಸಿಮೆಂಟ್ ವಾಲ್, ನಿರ್ಮಿಸಿ ಸುಸ್ಥಿತಿಯಲ್ಲಿಡಲಾಗುತ್ತಿದೆ. ಹಾಗೂ ಆನೆ ತಡೆ ಕಂದಕಗಳ ಮೂಲಕ ನೀರು ಹರಿದು ಹಳ್ಳಕೊಳ್ಳ ಬಿದ್ದಂತಹ ಸ್ಥಳಗಳಲ್ಲಿ ಚೆಕ್‌ಡ್ಯಾಂ ಮತ್ತು ಕಲ್ವರ್ಟ್‌ಗಳನ್ನು ನಿರ್ಮಿಸುವ ಮೂಲಕ ಆನೆ ತಡೆ ಕಂದಕಗಳನ್ನು ದುರಸ್ಥಿಗೊಳಿಸಿ ಸುಸ್ಥಿತಿಯಲ್ಲಿಡಲಾಗುತ್ತಿದೆ.

ಬೇಗೂರು ಐಟಿಐ ಕಾಲೇಜು ಕಟ್ಟಡ

374 (204) ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) :– ಕಾರ್ಮಿಕ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಗ್ರಾಮದ ಸರ್ಕಾರಿ ಐಟಿಐ ಕಾಲೇಜಿನ ಕಟ್ಟಡ ನಿರ್ಮಾಣದ ವಿಸ್ತರಣೆ, ವಸತಿ ಗೃಹ ಹಾಗೂ ಕಾಂಪೌಂಡ್ ನಿರ್ಮಾಣಕ್ಕೆ ಅನುದಾನ ಬಿಡುಗಡೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ಐಟಿಐ ಕಾಲೇಜಿನ ಕಟ್ಟಡ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ನಿರ್ಮಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು? (ವಿವರ ನೀಡುವುದು);

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):–

ಅ) ಹೌದು

Yes

ಆ) 2008–09ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯ ಆಯವ್ಯಯ ಅನುಬಂಧ–ಈ ಯೋಜನೆಯಡಿ ಸದರಿ ಕೈಗಾರಿಕಾ ತರಬೇತಿ ಸಂಸ್ಥೆಯ ನಿರ್ಮಾಣಕ್ಕಾಗಿ ರೂ.150.00 ಲಕ್ಷಗಳ ಅನುದಾನ ಕಲ್ಪಿಸಲಾಗಿದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ–2ನೇ ಲೋಕೋಪಯೋಗಿ ಇಲಾಖೆ ಗುಂಡ್ಲುಪೇಟೆ ಇವರು ತಮ್ಮ ಪತ್ರ ದಿನಾಂಕ: 12–11–2010 ರಲ್ಲಿ ತಿಳಿಸಿರುತ್ತಾರೆ.

ಒದಗಿಸಲಾಗಿದ್ದ ರೂ.150.00 ಲಕ್ಷಗಳಲ್ಲಿ ಈಗಾಗಲೇ 696–ಚ.ಮೀ. ವಿಸ್ತೀರ್ಣದ ಆಡಳಿತಾತ್ಮಕ ಕಟ್ಟಡ ಹಾಗೂ 616–ಚ.ಮೀ. ವಿಸ್ತೀರ್ಣದ ಕಾರ್ಯಗಾರ ಕಟ್ಟಡವನ್ನು ನಿರ್ಮಿಸಲಾಗಿದೆ.

ಮುಂದುವರೆದು, ಹೆಚ್ಚುವರಿ 05 ವೃತ್ತಿಗಳಿಗಾಗಿ ಅಗತ್ಯವಿರುವ 465 ಚ.ಮೀ. ವಿಸ್ತೀರ್ಣದ ಆಡಳಿತಾತ್ಮಕ ಕಟ್ಟಡ ಹಾಗೂ 557.77 ಚ.ಮೀ. ವಿಸ್ತೀರ್ಣದ ಕಾರ್ಯಗಾರ ಕಟ್ಟಡ ನಿರ್ಮಿಸಲು ಅನೂಕೂಲವಾಗುವಂತೆ, ರೂ.230.00 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಸೂಕ್ತ ಲೆಕ್ಕಶೀರ್ಷಿಕೆಯಡಿ ಒದಗಿಸುವಂತೆ ಕೋರಿರುತ್ತಾರೆ.

ಹೆಚ್ಚುವರಿ ಕಟ್ಟಡ ನಿರ್ಮಾಣಕ್ಕಾಗಿ ಮುಖ್ಯ ವಾಸ್ತುಶಿಲ್ಪಿಗಳು, ಕರ್ನಾಟಕ ಸರ್ಕಾರ ಇವರಿಂದ ಕಟ್ಟಡದ ನಕ್ಷೆಗಳನ್ನು ಸಿದ್ಧಪಡಿಸಲಾಗಿದ್ದು, ಅಗತ್ಯ ಅನುದಾನ ಬಿಡುಗಡೆಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗುವುದು.

In his letter dated 12-11-2010, the Assistant Executive Engineer No. 2 Sub Division, Public Works Department Gundlopet, has informed that provision has been made in Appdenix-E for Rs. 150.00 lakhs during 2008-09 budget to take up the construction of ITI building. Out of this amount 696 Sq.mtr. of administrative and 616 Sq.mtr. of workshop building was constructed.

Rs. 230.00 lakhs was sought under suitable head of account for construction of 465 Sqr. administrative and 557.77 Sq.mtr. workshop building required for additional 5 more trades. Blue prints for construction of additional building has already been prepared by Chief Architect.

Finance department will be requested to release the required grants for construction of the additional building.

ಅನುದಾನ ಬಿಡುಗಡೆ

379 (819) ಶ್ರೀ ಎ. ಮಂಜು (ಅರಕಲಗೂಡು) :– ಜಲ ಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಜಲ ಸಂಪನ್ಮೂಲ ಇಲಾಖೆಯು ಕೈಗೊಂಡ ಯೋಜನೆಗೆ 2008–09, 2009–10 ಮತ್ತು 2010–11 ನೇ ಸಾಲಿನಲ್ಲಿ ಎಷ್ಟು ಅನುದಾನವನ್ನು ಬಿಡುಗಡೆ